ಇನ್ನಷ್ಟು ಕೆಂಪಾಗಿತ್ತು. ಹೋಳಿಟ್ಟ ಕಲ್ಲಂಗಡಿ ತರಹ. ಬಸೂ ಮೊದಲೇ ಬಂದಿದ್ದ. ಭರಪೂರ ನೆರಳಿತ್ತು. ಸುತ್ತಲೂ ಹರವಿ ಬಿದ್ದ ಮರದ ಒಣ ಎಲೆ. ಚಿಕ್ಕ ಟೊಂಗೆಯ ತುಣುಕು ಕಡ್ಡಿಗಳು. ಆಕೆ ಹೆಜ್ಜೆಗಳನ್ನಿಡುತ್ತ ಆಗಮಿಸುವಾಗ ಚರ್ರಕ್ ಚರ್ರಕ್ ಎಂಬ ಎಲೆಯ ಸಪ್ಪುಳವು ಹಿನ್ನೆಲೆ ಸಂಗೀತ ನೀಡಿದ ಹಾಗಿತ್ತು. 'ನೀ ಬಂದ ಭಾಳ ಹೊತ್ತಾತು?' ಅಂದಳು.

'ನೀ ಬರೋಕ ಜರಾ ಪೈಲೆ ಬಂದೇನಿ...' ಅಂದ. ತಾನು ಉತ್ಸಾಹವನ್ನು ಕಳಕೊಳ್ಳುತ್ತಿದ್ದೇನೇನೋ ಎಂದು ಬಸೂಗೆ ಅನಿಸಿತು. ಸಾವರಿಸಿಕೊಂಡ. ಬಿರು ಬಿಸಿಲಲ್ಲೂ ಇಬ್ಬರಲ್ಲಿ ಭೀಕರ ಮೌನದ ಕತ್ತಲು ಆವರಿಸಿತು. ಆ ಕತ್ತಲು ಸೀಳಲೇಬೇಕೆಂಬ ಹಟ ತೊಟ್ಟಂತೆ. 'ನೀ ಏನೋ ಕೇಳಬೇಕಂದಿದ್ದಿ?' ಒಮ್ಮೆ ಕೆಳಗೆ ನೋಡಿ, ಮತ್ತೆ ಕಣ್ಣಲ್ಲಿ ಕಣ್ಣಿಟ್ಟು ಕಡು ದಿಟ್ಟೆಯಂತೆ ಅಂದಳು. ಕಟ್ಟಿಗೆ ಒಡೆಯುವವ ಕೊರಡಿಗೆ ಕೊಡಲಿ ಏಟು ಬೀಸುವಂತೆ, 'ನೀ ನನಗ ಯಾಕ ಮೋಸ ಮಾಡಿದಿ? ಯಾಕ ನನ್ನ ಮದ್ವಿ ಆಗಲಿಲ್ಲ? ಅವತ್ತ ಮುಸ್ಸಂಜಿ ನೀ ಮುಟ್ಟದಾಗಿಂದ ನನದೆಲ್ಲಾನು ನಿಂದ ಅಂದುಕೊಂಡ ಕಾದ ಕಾದಿನಿ... ನೀ ಧಾರವಾಡಕ್ಕ ಕಲ್ಯಾಕ ಹ್ವಾದಾಂವಾ ಪರತನಿಂದ ಪತ್ತೇನ ಇಲ್ಲ...' ಆಕೆಯ ಕಣ್ಣು ಕೊಳದೊಳಗೆ ನೀರು ಜಿನುಗ ತೊಡಗಿತ್ತು. 'ಅವತ್ತ ನೀನು, ಅಕ್ಕ ನನಗ ನಿಪ್ಪಾಣಿಗಿ ಬಿಡಾಕ ಬಂದಾಗ ನಿನ್ನ ಬಿಟ್ಟ ಹೋಗಾಕ ಮನಸ್ಸ ಇರಲಿಲ್ಲ... ಬಸ್ ಬಿಟ್ಟಾಗ ಮನಸ್ಸ ತೊಳಲ್ಯಾಡಿತು... ಮುಖಕ್ಕ ಕರ್ಚಿಪು ಹಾಕಿಕೊಂಡ ಅತ್ತ ಅತ್ತಿನಿ... ನೀನ ನನ್ನ ಗಂಡ... ನಿನ್ನ ಬಿಟ್ಟ ಯಾರನ್ನು ಮದ್ವಿ ಆಗಬಾರದು ಅಂತ ಠರಾಯಿಸಿದಿನಿ... ಆದರ... ಆದರ ಕಡೀಕೂ ಯಾನಾತು?' ಆಕೆಯ ಈ ನುಡಿಗಳು ನಾಲ್ಕು ದಿಕ್ಕಿನ ಕೂಡು ರಸ್ತೆಯ ಮಧ್ಯೆ ನಿಲ್ಲಿಸಿ, ಸಾವಿರಾರು ಜನರೆದುರು ನೂರಾರು ಚಾಟಿ ಏಟುಗಳನ್ನು ಕೊಟ್ಟಂತಿತ್ತು.

'ನಿನಗ ಪೈಲೇನ ಹೇಳಿದ್ನಿ... ನಿಮ್ಮದು ಸಿರಿವಂತ ಮನಿತನ... ನಿಮ್ಮ ಮನ್ಯಾಗಿನವರು ನನಗ ನಿನ್ನ ಕೊಡೋದ ಕಷ್ಟ ಅಂತ...' ಆಯಿತು... ಹೋಗಲಿ... ಕಡೀಕ ನಿನ್ನಿಂದಾಗಲಿ, ಸರಿತ್ತಕ್ಕನಿಂದಾಗಲಿ ಒಂದಾದರೂ!? ಯಾವದ ಸೂಚನಾನ ಬರಲಿಲ್ಲ... ನಾ ಯಾನ ತಿಳಕೊಳ್ಳಲಿ? ನನಗೂ ನಿನ್ನ ಮ್ಯಾಲ ಮನಸ ಸದಾ ಹರಿತ್ಯೆತೀನ... ಈಗಲೂ ಸಹ... ಆದರ ನಾ ಯಾನ ಮಾಡಲಿ? ಹೆಂಗ ಮಾಡಲಿ? ನಾಇಲಾಜ ಆತು... ಯಾನ ಮಾಡೋದು ತಿಳಿಲಿಲ್ಲ...' ಆಕೆಯಲ್ಲೂ ಈ ಪ್ರಶ್ನೆಗೆ ಉತ್ತರ ಇರಲಿಲ್ಲವೇನೋ. ಬಸೂನೆ ಹೇಳಿದ. 'ಸುಭದ್ರ ವೈನಿ ಗಂಡ ವೀರಭದ್ರ ಭಾಳ ಕೊಳಕ ಮನಸ್ಯಾ... ನಿನ್ನ ನನಗ ಕೊಡೋದಕ್ಕ ವಿರೋಧ ಮಾಡಿದನಂತ? ಹಿಂಗ ನನಗ ಐಕಿವಾತನ್ಯಾಗ ಕೇಳಲಿಕ್ಕೆ ಸಿಕ್ಕಿತು...'

'ಹೌಂದ... ಅಂವನ ನನ್ನ ಕನಸಿಗಿ ಕೊಳ್ಳಿ ಇಟ್ಟ ಮತ್ತ ಹದಿನೆಂಟ ವಯಸ್ಸಿಗೇನ ಒಂದ ಹೊಲಮನಿ ರಗಡಿರೋ ವ್ಯಾಪಾರಸ್ಥರ ಮನಿತನ ತಗದು ಮದ್ವಿ ಮಾಡಿಸಿದ... ನನ್ನ ಬಾಳೇ ಹಾಳ ಮಾಡಿದ... ಹರೇದ ಮಣಕ ಒಯ್ದು ದನದ ಕೊಟ್ಟಗಿಗಿ ಕಟ್ಟದಂಗ...!'

ಆಕೆಯ ಅವಸ್ಥೆ ಹೇಗಿತ್ತೆಂದರೆ ಸಾಗರದ ಆಳದಲ್ಲೆಲ್ಲೋ ತನ್ನನ್ನು ದೊಡ್ಡ ಕಲ್ಲಿಗೆ ಬಿಗಿದು ದಡ್ಡನೆ ಎಸೆದಂತಿತ್ತು. 'ಅದಕ್ಕೂ ಒಂದ ಕಾರಣದ... ಬಹುತೇಕ ಭಾಳ ಮಂದಿಗಿ ಗೊತ್ತಿರಲಿಕ್ಕಿಲ್ಲ...' ವಿಷಯ ಎತ್ತಿದ. 'ಯಾನದು?' ಕುತೂಹಲದಿಂದ ಕೇಳಿದಳು. 'ವೀರಭದ್ರನ ಸ್ವಭಾವ ಯಾವಾಗಲೂ ಸಂಶಾದ್ದು... ವೈನಿ ಸಂಗಾಟ ನಾನ ಸಲುಗಿಂದಿರೋದು ಅಂವಗ ಸರಿ ಬರತಿರಲಿಲ್ಲ... ಒಮ್ಮಿ ವೈನಿ ಗಣೇಶವಾಡಿಯೊಳಗಿದ್ದಳು... ಕೃಷ್ಣಾ ಹೊಳಿದಂಡಿ ಊರು... ಅಲ್ಲಿ ಹೈನೋದ್ಯಮ ಅದ... ಅದ ನಿನಗ ಗೊತ್ತದನ... ನನಗ ಆಗ ಯಾವುದೋ ದಗದಕ್ಕ ವೈನಿ ಕರದಿದ್ದಳು... ಹೋಗಿದ್ನಿ... ರಾತ್ರಿ ವಸತಿ ಉಳದ್ನಿ... ಅದಕ್ಕ ವೀರಭದ್ರ ಯಾನ ಸಂಶಾ ಪಟ್ಟನೋ! ನನಗೂ ವೈನಿಗೂ ಸಂಬಂಧ ಐತಿ ಅಂತ ಕತಿ ಕಟ್ಟದ... ಸುಳಕೋಡ ನಿಮ್ಮ ಮನ್ಯಾಗ ಪುಕಾರ ಎಬ್ಬಿಸಿದ... ಅಂವ ಇಂಥ ನೀಚತನಕ್ಕ ಇಳಿತಾನಂತ ಅನಿಸಿರಲಿಲ್ಲ... ತನ್ನ ಹೆಂತಿ ಮ್ಯಾಲನ ಅಪವಾದ... ಎಮ್.ಕಾಮ್ ಮಾಡಿರೊ ಮನಸ್ಯಾ ಬ್ಯಾರೆ...'

'ಇದ ನನಗ ಗೊತ್ತ ಇಲ್ಲ... ಈಗ ನನಗ ಅರ್ಥ ಆತು... ಅದಕ್ಕ ನಿನಗ ನನ್ನ ಕೊಡೋದಕ್ಕ ವಿರೋಧ ಮಾಡಿದ ಭಾಡ್ಯಾ ಎಲ್ಲಾಂವಾ...'

ಬಹುದೊಡ್ಡ ಪಶ್ಚಾತ್ತಾಪದ ಸುಳಿಯೊಳಗೆ ಸಿಕ್ಕು ಮುಳುಗಿ ಹೋಗಿ ಜೀವವನ್ನು ಕಳಕೊಂಡಂತೆ ರೂಪಾಳಿಗೆ ಅನಿಸಿತು.

'ಆಗೋದ ಆಯಿತು... ನೀ ಸುಖವಾಗಿ ಅದೀ?' ಎದೆ